ನಾನೇಕೆ ಬರ್ತಾ ಇದ್ದೆ, ಬೈ ನಾನು ಹೊರಟೆ, ನೀನಿಲ್ಲೇ ಇದ್ಕೋ ಬೇಕಾದರೆ,' ಅಂತ ಅಂದವನೇ ನೇರ ಕಾರಿಗೆ ಹೋದ. ಇವಳು ಸಮಾಧಾನ ಮಾಡಿ ಅವನನ್ನು ವಾಪಸ್ ಕರೆಯುವುದಕ್ಕೆ ಅಂತ ಅವನ ಹಿಂದೆಯೇ ಹೋದಳು. ಕಾರಿನಲ್ಲೂ ಜೋರು ಮಾತು. ಆಮೇಲೆ ಇಬ್ಬರೂ ಹೊರಟೇ ಹೋದರು. ಅವಳು ಮನೆ ಒಳಗೆ ಬರಲೇ ಇಲ್ಲ."

"ವಾಪಸ್ ಸಿಡ್ನೀಗಾ?"

"ಹೌದು. ಆಗಲೇ ಕ್ಯಾಂಬಲ್ ಟೌನ್ ಹತ್ತಿರ ಇದ್ದಾರಂತೆ. ಫೋನ್ ಮಾಡಿ 'ಸಾರಿ' ಹೇಳಿದಳು. ಅಲ್ಲಿ ಮಳೆ ಅಷ್ಟೇನೂ ಇಲ್ಲವಂತೆ."

ಏನೂ ಮಾತನಾಡಲಿಲ್ಲ ರವಿಶಂಕರ್. ಪದ್ಮಾ ಉವಾಚ ಅಲ್ಲಿಗೆ ನಿಲ್ಲಲಿಲ್ಲ. ಮುಂದುವರೆಸಿದರು.

"ನಿಮಗೇನ್ರಿ ಆಗಿದೆ. ಅಷ್ಟೂ ಗೊತ್ತಾಗೋದಿಲ್ಲವಾ? ದೂರದಿಂದ ಮಗಳು, ಅವಳ ಸ್ನೇಹಿತ ಬಂದರೂ ಅವರ ಎದುರು ಹಾಗೆ ಆಡ್ತೀರ."

"ನಾನೇನು ಮಾತಾಡ್ದೆ?"

"ಮಾತಾಡ ಬೇಕಾ? ಮುಖ ನೋಡಿದರೆ ಗೊತ್ತಾಗೋದಿಲ್ಲವಾ? ಸ್ವಲ್ಪ ಆದರೂ ನಗುಮುಖ ಬೇಡ್ವಾ?''

"ನನ್ನ ಮನಸ್ಸಿನಲ್ಲಿ ಏನಿತ್ತು ಅನ್ನೋದು ನಿನಗೂ ಗೊತ್ತು. ಇಲ್ಲಾ ಅನ್ನ ಬೇಡ."

"ಗೊತ್ತು, ಖಂಡಿತ ಗೊತ್ತು. ನಿಮ್ಮ ಆತಂಕ, ಸಂಕಟ ನನಗೂ ಆಯಿತು. ಅವರಿಬ್ಬರಿಗೂ ಮದುವೆ ಆಗಿದ್ದರೆ ಒಂದು ತರಹ. ನನ್ನ ಬಾಯಲ್ಲಿ ಆ ಪದ ಬಂದರೆ ಸಾಕು, ಈಗಲೂ ಅನಿತಾ ಕಿರುಚಾಡ್ತಾಳೆ. ಏನೂ ಇಲ್ಲದೇ ಇವೆಲ್ಲಾನಾ, ನನಗೂ ಅರ್ಥವಾಗುತ್ತೆ. ಆದರೆ ಏನು ಮಾಡೋದು ಹೇಳಿ. ಅಲ್ಲಾರೀ. ನೀವು ಅವರು ಇಲ್ಲಾಡೋದಕ್ಕೆ ಗೋಳಾಡ್ತೀರ. ಈಗ ಅವರು ಸಿಡ್ನಿಗೆ ಹೋದರು, ನಂತರ ಆಸ್ಟ್ರೇಲಿಯಾ ಎಲ್ಲಾ ಓಡಾಡ್ತಾರೆ, ಆಮೇಲೆ ಬರ್ಕ್ಲೀಗೆ ಹೋಗ್ತಾರೆ. ಅಲ್ಲೆಲ್ಲಾ ಅವರೇನು ಮಾಡ್ತಾರೆ ನಿಮಗೆ ಗೊತ್ತಾ? ಅಥವಾ ನೀವು ಅವರ ಮೇಲೆ ಅಲ್ಲೆಲ್ಲಾ ನಿಗಾ ಇಡೋದಕ್ಕೆ ಆಗುತ್ತಾ? ಹೀಗೆ ಮುಖ ಮಾಡ್ಕೊಂಡ್ರೆ ಸಮಸ್ಯೆ ಬಗೆಹರಿಯುತ್ತಾ? ಅಲ್ಲದೆ ಈಗ ನಮ್ಮ ಕೈಯ್ಯಲ್ಲಿ ಏನಿದೆ? ಆಗೋದನ್ನು ನೋಡ್ತಾ ಕೂರಬೇಕು.'' ಎಂದ ಪದ್ಮಾ, "ನಿಮ್ಮ ಜೀವನ ಎಲ್ಲಾ ಪೇಷಂಟುಗಳಿಗೆ ಔಷಧಿ ಕೊಡೋದರಲ್ಲಿ ಆಯಿತು ಅಷ್ಟೆ. ಸ್ವಲ್ಪಾನಾದರೂ ತಿಳಿವಳಿಕೆ ಬೇಡವಾ?" ಎಂದು ಕುಟುಕಿದರು.

## ಸಿಡ್ನಿ ಶ್ರೀನಿವಾಸ್

ಮೂಲತಃ ಬೆಂಗಳೂರಿನವರಾದ ಸಿಡ್ನಿ ಶ್ರೀನಿವಾಸ್ ಬೆಂಗಳೂರು ವಿಶ್ವವಿದ್ಯಾಲಯದಿಂದ ಬಿ.ಇ ಪದವಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಎಂ.ಇ ಹಾಗೂ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಆಸ್ಟ್ರೇಲಿಯಾದ ಸಿಡ್ನಿ ವಿಶ್ವವಿದ್ಯಾಲಯದ 'ಏರೋಸ್ಪೇಸ್ ಅಂಡ್ ಮೆಕ್ಯಾನಿಕಲ್ ಎಂಜಿನಿಯರಿಂಗ್' ವಿಭಾಗದಲ್ಲಿ ಕೆಲಸ ಮಾಡಿ ನಿವೃತ್ತರು.

ಆಸ್ಟ್ರೇಲಿಯಾ ಮಾತ್ರವಲ್ಲದೇ ಜರ್ಮನಿ, ಜಪಾನ್, ಅಮೆರಿಕ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಗಳನ್ನು ಮಾಡಿದ್ದಾರೆ. 'ಫ್ಲೂಯಿಡ್ ಮೆಕ್ಯಾನಿಕ್', 'ಆಪ್ಟಿಮೈಜೇಶನ್' ವಿಷಯಗಳಲ್ಲಿ ಪರಿಣತರು. ಅವರ ಸುಮಾರು 100 ಸಂಶೋಧನಾ ಪ್ರಬಂಧಗಳು ಪ್ರಕಟವಾಗಿವೆ. 'ಶ್ರೀನಿವಾಸ ರಾಮಾನುಜನ್', 'ಗೆಲಿಲಿಯೊ', 'ನ್ಯೂಟನ್', 'ಅಲ್ಬರ್ಟ್ ಐನ್‌ಸ್ಟೈನ್' ಈ ನಾಲ್ಕು ವಿಜ್ಞಾನಿಗಳ ಕುರಿತ ಪುಸ್ತಕಗಳು ಕನ್ನಡ, ಇಂಗ್ಲಿಷ್‌ನಲ್ಲಿ ಪ್ರಕಟವಾಗಿವೆ. ಇಂಗ್ಲಿಷ್‌ನಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಐದು ತಾಂತ್ರಿಕ ಪುಸ್ತಕಗಳನ್ನು ಅವರು ಪ್ರಕಟಿಸಿದ್ದಾರೆ. ಪ್ರಸ್ತುತ ಆಸ್ಟ್ರೇಲಿಯಾದಲ್ಲಿ ನೆಲೆಸಿದ್ದಾರೆ.